ವ್ಯಸನವಾಗಿಬಿಡುತ್ತದೆ. ಆ ವ್ಯಸನ ಅವಸಾನದತ್ತ ಕರೆದೊಯ್ಯಲೂಬಹುದು ಎನ್ನುವುದಕ್ಕೆ ಪುರಾಣ, ಇತಿಹಾಸದಲ್ಲಿ ಮಾತ್ರವಲ್ಲ, ವರ್ತಮಾನದಲ್ಲೂ ಸಾಕಷ್ಟು ಉದಾಹರಣೆಗಳಿವೆ.

ಕನ್ನಡದ ಮೇಷ್ಟರೊಬ್ಬರಿಗೆ ಮಗಳ ಮದುವೆಯ ವಿಚಾರಕ್ಕೆ ಬೇಸರವಾಗಿತ್ತು. 'ಅವಳು ತನ್ನಿಷ್ಟದ ವ್ಯಕ್ತಿಯನ್ನು ಆರಿಸಿಕೊಂಡಿದ್ದಾಳೆ. ಅದಕ್ಕೆ ಒಪ್ಪಿ, ಮದುವೆ ಮಾಡಿಕೊಡಿ. ನಾಳೆ ಅಕಸ್ಮಾತ್ ಆಕೆಗೆ ಸಮಸ್ಯೆ ಉಂಟಾಗಿ ಮನೆಗೆ ಮರಳಿದರೆ, ಬಾಗಿಲನ್ನು ತೆರೆದಿಡಿ' ಎಂದು ಅವರಿಗೆ ನಾನು ಸಲಹೆ ನೀಡಿದ್ದೆ.

ಪೊಲೀಸ್ ಅಧಿಕಾರಿಗಳ ಮನೆಗಳಲ್ಲಿ ಕೆಲಸ ಮಾಡುವ ಆರ್ಡರ್ಲಿಗಳ ಮಕ್ಕಳು ಎಷ್ಟೋ ವಿಷಯಗಳಲ್ಲಿ ಪಾಸಾಗಿರುತ್ತಾರೆ. ಆದರೆ, ಅಧಿಕಾರಿಗಳ ಮಕ್ಕಳು ಸೂಕ್ಷ್ಮ ಸಂಗತಿಗಳಲ್ಲಿ ನಪಾಸಾಗಿರುತ್ತಾರೆ. ಇದು ಕೇವಲ ಶಿಕ್ಷಣದ ಪರೀಕ್ಷೆಗೆ ಸಂಬಂಧಿಸಿದ್ದಲ್ಲ.

ವ್ಯಾಕುಲದಲ್ಲಿ ಎಷ್ಟೋ ಜನ ಈಗ ಗುರೂಜಿಗಳ ಬಳಿಗೆ ಹೋಗುತ್ತಾರೆ. 'ಮಾಂಗಲ್ಯ ಗಟ್ಟಿಯಾಗಿ ಇರಲೆಂದು ಆಶೀರ್ವಾದ ಮಾಡಿ' ಎಂದು ಕೇಳುತ್ತಾರೆ. ವಿದ್ಯಾರ್ಥಿಯನ್ನು ಕರೆದುಕೊಂಡು ಹೋಗಿ, ಏನು ಓದಬೇಕು ಎಂದು ಅಲ್ಲಿಯೇ ಸಲಹೆ ಪಡೆಯಲಾರಂಭಿಸುತ್ತಾರೆ. ನಿಜಕ್ಕೂ ಅವರು ಹೋಗಬೇಕಾಗಿರುವ ಜಾಗ ಅದಾಗಿರುವುದಿಲ್ಲ.

ಓಂ ಪ್ರಕಾಶ್ ಅವರ ಪತ್ನಿ ಪಲ್ಲವಿ ಅವರ ಸಂದೇಶಗಳನ್ನು ನೋಡಿದರೆ ಅವರಿಗೆ ಮನೋವ್ಯಾಧಿ ಇತ್ತೆನ್ನುವುದರಲ್ಲಿ ಅನುಮಾನವೇ ಇಲ್ಲ. ಅದಕ್ಕೆ ಕೊಡಿಸಬೇಕಾದ ಚಿಕಿತ್ಸೆ ದಕ್ಕಿದ್ದಿದ್ದರೆ ಇಷ್ಟು ಕ್ರೂರಿ ಆಗುತ್ತಿರಲಿಲ್ಲವೋ ಏನೋ?

ನನಗೆ ಪರಿಚಯದ ವಕೀಲರೊಬ್ಬರಿದ್ದಾರೆ. ಅವರು ಮನೆಗೆ ಆಯಾ ದಿನಕ್ಕೆ ಎಷ್ಟು ದಿನಸಿ ಬೇಕೋ ಅಷ್ಟನ್ನು ಮಾತ್ರ ಕೊಡುತ್ತಾರೆ. ಅದರಲ್ಲಿ ಅಡುಗೆ ಮಾಡುವಂತೆ ಹೆಂಡತಿಯನ್ನು ಕಟ್ಟುಪಾಡಿನಲ್ಲಿ ಇಡುತ್ತಾರೆ. ಎಲ್ಲಕ್ಕೂ ಅನುಮಾನ.

ಐಟಿ ಪದವೀಧರನೊಬ್ಬ ಇದ್ದಾನೆ. ಅವನ ಪತ್ನಿ ತನಗೆ ಮದುವೆಗೆ ಮುಂಚೆ ಒಬ್ಬನ ಜೊತೆಗೆ ಪ್ರೇಮಾಂಕುರವಾಗಿತ್ತು ಎಂದು ಪ್ರಾಮಾಣಿಕವಾಗಿ ಹೇಳಿಬಿಟ್ಟಳು. ಆಗಿನಿಂದ ಸತತವಾಗಿ ಕಿರುಕುಳ ಕೊಡುತ್ತಿದ್ದಾನೆ. ಅವಳು ತನ್ನ ತಾಯಿಯನ್ನು ಕಳೆದುಕೊಂಡಳು. ಕಚೇರಿಯವರು ಅವಳನ್ನು ಅಮೆರಿಕಕ್ಕೆ ಕಳುಹಿಸಿದರು. ಈತ ತನ್ನ ಕೆಲಸ ಬಿಟ್ಟು, ಅವಳ ಹಿಂದೆಯೇ ಹೋದ. ಅವಳು ಅಲ್ಲಿ ವಾರಾಂತ್ಯದಲ್ಲಿ ಪಾರ್ಟಿಗಳಿಗೆ ಹೋಗುವುದು ವೃತ್ತಿಯ ಭಾಗ. ಪಾರ್ಟಿಗಳಿಗೆ ಹೋದರೆ, ನೂರೆಂಟು ಪ್ರಶ್ನೆ ಕೇಳಿ ಆತ ಅನುಮಾನಿಸುತ್ತಾನೆ.



ಮನಸ್ಸು ಹೂವಿನಂತೆ. ಛಿದ್ರಗೊಂಡರೆ ಸೂತಕದ ನೆರಳು.

ಅವಳು ಗಂಡನ ತಂದೆಯ ಒಳಉಡುಪನ್ನು ಮಡಿಸಿಟ್ಟಿದ್ದಳು. ಅದಕ್ಕೂ ಅವನು ತಕರಾರು ತೆಗೆದ. ತಾನು ಆಕೆಯ ತಾಯಿಯ ಒಳಉಡುಪನ್ನು ಮಡಿಸಿದರೆ ಏನನ್ನಿಸುತ್ತದೆ ಎಂದೆಲ್ಲ ಪ್ರಶ್ನಿಸಿದ. ಶೌಚಾಲಯಕ್ಕೆ ಹೋದರೆ ಫ್ಲಷ್ ಮಾಡದೇ ಬರುವಷ್ಟು ಮನಸ್ಸು ಹಾಳಾಗಿರುವ ವ್ಯಕ್ತಿ ಅವನು.

ಅನುಮಾನ ಪಿಶಾಚಿ ಹೇಗೆಲ್ಲ ಕೆಲಸ ಮಾಡುತ್ತದೆ ಎನ್ನುವುದಕ್ಕೆ ಉದಾಹರಣೆಗಳು ನಮ್ಮ ಸುತ್ತಮುತ್ತಲೇ ಸಾಕಷ್ಟಿವೆ. ಯಾರೋ ಒಬ್ಬರು ವಿಳಾಸ ಕೇಳಿಕೊಂಡು ಬಂದರು. ಅವರಿಗೆ ದಾರಿ ಹೇಳಿದ ಹೆಂಡತಿಯನ್ನು ಆತ ಅನುಮಾನದಿಂದ ಕಂಡು, ಪ್ರಶ್ನಿಸಲಾರಂಭಿಸಿದ್ದ.

ಸಾವಿರ ಸುಳ್ಳುಗಳನ್ನು ಹೇಳಿ ಮದುವೆ ಮಾಡುತ್ತೇವೆ, ಮಕ್ಕಳಾದರೆ ಎಲ್ಲವೂ ಸರಿಹೋಗುತ್ತದೆ ಎನ್ನುವ ಭ್ರಮೆಯಲ್ಲಿ. ನಾನು ಮನೋಚಿಕಿತ್ಸಕನಾಗಿ ವಧು–ವರರ 'ಮ್ಯಾಚ್ ಮೇಕಿಂಗ್' ಮಾಡಿಕೊಡುತ್ತೇನೆ. ಅವರ ಗಣಗಳನ್ನು ತಾಳೆಹಾಕುವುದು ನನಗೆ ಗೊತ್ತಿಲ್ಲ, ಗುಣಗಳನ್ನು ಮಾತ್ರ ತಾಳೆಹಾಕಬಲ್ಲೆ.

ಮತ್ತೊಬ್ಬರು ಮಕ್ಕಳರೋಗ ತಜ್ಞರು. ಮದುವೆಯಾಗಿ ಒಂಬತ್ತು ವರ್ಷಗಳಾಗಿವೆ. ಏಳು ವರ್ಷದ ಮಗು ಇದೆ. ಅದೊಂದು ದಿನ ಇದ್ದಕ್ಕಿದ್ದಂತೆ ತನ್ನ ಪತ್ನಿ ಹೆಚ್ಚು ಹಿಂದಿ ಹಾಡುಗಳನ್ನು ಕೇಳುತ್ತಾಳೆ ಎಂಬ ಕಾರಣಕ್ಕೆ ಕ್ಯಾತೆ ತೆಗೆಯಲಾರಂಭಿಸಿದ. ಆತನೂ ಒಬ್ಬ ಸದ್ಗುರುವಿನ ಬಳಿಗೆ ಹೋದ. ಆ ಗುರುವು ಸೂಚಿಸಿದ ಬಣ್ಣದ ಬಟ್ಟೆಯನ್ನೇ ದಂಪತಿ ತೊಟ್ಟಿರಬೇಕಿತ್ತು. 'ಯಾವ ಬಣ್ಣದ ಒಳಉಡುಪು ತೊಟ್ಟಿರುವೆ' ಎಂದು ಅವನು ತನ್ನ ಹೆಂಡತಿಯನ್ನು ಕೇಳುವ ಮಟ್ಟಕ್ಕೂ ಇಳಿದಿದ್ದ.

ಅತ್ತೆ ಫೇಸ್ ಪೌಡರ್ ಹಚ್ಚಿಕೊಂಡಿದ್ದಕ್ಕೆ ಪತ್ನಿಯ ಮೇಲೆ ಎರಗಿಬಿದ್ದ ವ್ಯಕ್ತಿಯನ್ನೂ ನಾನು ಕಂಡಿರುವೆ.

ನನಗೂ, ನನ್ನ ಪತ್ನಿಗೂ ಅಭಿರುಚಿಯಲ್ಲಿ ವ್ಯತ್ಯಾಸವಿದೆ. ವಿವಾಹ ವಿಚ್ಛೇದನ ಪಡೆಯಲು ಐದಾರು ಕಾರಣಗಳು ಸಿಕ್ಕರೆ, ಜೊತೆಯಲ್ಲಿ ಬಾಳಲು ಮೂರ್ನಾಲ್ಕು ಕಾರಣಗಳಾದರೂ ಸಿಗುತ್ತವೆ.

ವಿ. ಮಧು ಎಂಬ ಐಎಎಸ್ ಅಧಿಕಾರಿ ಇದ್ದರು. ಅವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ ನಿರ್ದಾಕ್ಷಿಣ್ಯವಾಗಿ ದಾಳಿಗಳನ್ನು ನಡೆಸಿದರು. ಹರಿ ಖೋಡೆ ಅವರು ₹80 ಕೋಟಿಗೂ ಹೆಚ್ಚು ತೆರಿಗೆ ಬಾಕಿ ಉಳಿಸಿಕೊಂಡಿದ್ದು ಪತ್ತೆಯಾಯಿತು. ಒಂದೇ ಕಂತಿನಲ್ಲಿ ಅಷ್ಟೊಂದು ವಾಣಿಜ್ಯ ತೆರಿಗೆ ಕಟ್ಟುವುದು ಕಷ್ಟ ಎಂಬ ಕಾರಣಕ್ಕೆ ಕಂತುಗಳಲ್ಲಿ ಕಟ್ಟಬಹುದೇ ಎಂಬ ಪ್ರಶ್ನೆ ಆಗ ಮುಖ್ಯಮಂತ್ರಿಯವರ ಕಚೇರಿಯಿಂದಲೇ ಬಂದಿತು. ಸರ್ಕಾರವು ಆ ರೀತಿ ಆದೇಶ ಮಾಡಿದಲ್ಲಿ ಕಟ್ಟಲು ಅವಕಾಶ ಕಲ್ಪಿಸಬಹುದು ಎಂದು ಮಧು ಹೇಳಿದರು. ಆದರೆ, ಯಾವುದೇ ಕಾರಣಕ್ಕೂ ತೆರಿಗೆ ಕದಿಯಲು ಅವರು ಅವಕಾಶ ಕೊಡಲಿಲ್ಲ. ದಾಳಿಗಳಲ್ಲಿ ಅವರು ಹಲವರು ಸುಮಾರು ₹140 ಕೋಟಿಗೂ ಹೆಚ್ಚು ತೆರಿಗೆ ಕಟ್ಟುವಂತೆ ಮಾಡಿದ್ದರು. ಅವರು ದೊಡ್ಡ ದೊಡ್ಡ ವ್ಯಕ್ತಿಗಳನ್ನು ಎದುರು ಹಾಕಿಕೊಂಡಾಗ, ಅದೇ ಇಲಾಖೆಯಲ್ಲಿ ಇದ್ದವರು